# ಬೇಲಿ ಮುರಿಯಬೇಕು

✍ ಶ್ರೀ ವಿದ್ಯಾವಾಚಸ್ಪತಿ ಬನ್ನಂಜೆ ಗೋವಿಂದಾಚಾರ್ಯ

ನನ್ನನ್ನು ನಾನು 'ನಾನು' ಎನ್ನುತ್ತೇನೆ.

ನನ್ನನ್ನು ನೀವು 'ನೀನು' ಎನ್ನುತ್ತೀರಿ.

ಇವು ಎರಡೂ ಹೊರಗಣ್ಣುಗಳು.

ನನ್ನ'ಅಹಂ', ನನ್ನ 'ಮುಖವಾಡ', ನನ್ನದಲ್ಲದ, ನಾನು ನನ್ನದೆಂದು ನಿಮಗೆ ತೋರಿಸುತ್ತ ಮಾಡುವ ವಂಚನೆಗಳೆಲ್ಲವೂ ನನ್ನ 'ನಾನು', ನನ್ನಬಗೆಗೆ ನೀವು ಮಾಡಿಕೊಂಡ ತಪ್ಪುಕಲ್ಪನೆಗಳೆಲ್ಲವೂ, ನಿಮ್ಮ ಕಲ್ಪನಾ ಗೋಪುರಗಳೆಲ್ಲವೂ ನನ್ನ 'ನೀನು',

ಎರಡೂ ನಿಜವಾದ ನಾನಲ್ಲ.

ಎರಡೂ ಎರಡು ಬಗೆಯ ಮುಖವಾಡಗಳು.

ಮುಖವಾಡ ಕಳಚಿದಾಗ ನಾನು ಏನು?

ಪ್ರಾಯಃ ಇದು ನನಗೂ ಪ್ರಶ್ನೆ; ನಿಮಗೂ ಪ್ರಶ್ನೆ.

ಮನುಷ್ಯ ಯೋಚಿಸಲು ತೊಡಗಿದಂದಿನಿಂದ ಅವನನ್ನು ಕಾಡುತ್ತಿರುವ ಪ್ರಶ್ನೆ.

ಇಂದಿಗೂ ಉತ್ತರ ಸಿಗದೆ, ಸಮಸ್ಯೆಯೇ ಆಗಿ ಉಳಿದಿರುವ ಪ್ರಶ್ನೆ. ಯೋಚಿಸುವ ಅಭ್ಯಾಸವೇ ಇಲ್ಲದ, ಪ್ರಶ್ನೆಯೇ ಇಲ್ಲದ ಮನುಷ್ಯ ಎಂಥ ಸುಖಿ?



ಹೌದು; ತಲೆಯೇ ಇಲ್ಲದವನು ಪರಮಸುಖಿ.

ತಲೆ ಇದ್ದವರು ಬತ್ತಲೆಯಾಗುವುದು ಬಹಳ ಕಷ್ಟ.

'ನಾನು- ನೀನು'ಗಳ ಕವಚ ಕಳಚಿ ಬತ್ತಲಾಗುವುದು ಹೇಗೆ?

ಇದು ಕರ್ಣನ ಅಭೇದ್ಯಕವಚ- ಅಭೇದ್ಯಕುಂಡಲ.

ಈ ಕವಚವನ್ನು ಕೀಳುವ ಇಂದ್ರ ಬೇಕಾಗಿದ್ದಾನೆ.

ಯಾರು ಆ ಇಂದ್ರ?

ಅವನು ದೇವಲೋಕದಿಂದ ಇಳಿದು ಬರುವ ಇಂದ್ರನಲ್ಲ.

ನೀವು-ನಾವೇ ಆ ಇಂದ್ರರು.

ಬದುಕಿನ ಯಕ್ಷಗಾನದಲ್ಲಿ ಕುಣಿಯಲು ಮುಖವಾಡ ತೊಟ್ಟವನೂ ನಾನೆ.

ಆ ಮುಖವಾಡವನ್ನು ಮುಖವರ್ಣಿಕೆಯನ್ನು ಕಳಚಬೇಕಾದವನೂ ನಾನೆ.

ಇಂದ್ರ ಎನ್ನುವುದರ ನಿರ್ವಚನ ತಿಳಿದಾಗ ಈ ಮಾತು ಸ್ಫುಟವಾಗುತ್ತದೆ.

ಇದಂ ಪ್ರತಿ ದ್ರವತಿ.

ಇದು-ನಮ್ಮ ಕಣ್ಣ ಮುಂದಿರುವ ಪ್ರಪಂಚ-ಇದಂ.

ಸಂಸ್ಕೃತದ 'ಇದಂ' ಕನ್ನಡದ 'ಇದು' ಆಯಿತು.

ಯಾವುದು ಈ ಇದು? ಈ ಪ್ರಪಂಚ?

ಕಣ್ಣು ಸೆಳೆಯುವ ರೂಪ, ಕಿವಿ ಮರುಳಾಗುವ ಶಬ್ದ, ಮೂಗು ಅರಳುವ ಗಂಧ, ಮೈನವಿರೇಳಿಸುವ ಸ್ಪರ್ಶ, ನಾಲಗೆಯಲ್ಲಿ ನೀರೂರಿಸುವ ರುಚಿ.

ಈ ಪಂಚವಿಧ ಪ್ರಪಂಚವನ್ನು ಅನುಭವಿಸುವ ಪಂಚೇಂದ್ರಿಯಗಳ ಪಂಜರದಲ್ಲಿ ಬದ್ಧನಾದ, ಚಪಲಚಿತ್ತನಾದ ಈ ಜೀವನೇ ಇಂದ್ರ.

ಅವನು ಪಂಜರದಿಂದ ಹೊರ ಬರಬೇಕು.

ಆದರೆ ಪಂಜರವೇ ರೋಚಕವಾಗಿ ಬಿಟ್ಟರೆ ಹೊರಗಿನ ಮುಕ್ತಾಕಾಶದಲ್ಲಿ ಹಾರಾಡುವ ಸ್ವಾತಂತ್ರ್ಯವೂ ಅಪ್ರಿಯವಾಗಿ ಬಿಡುತ್ತದೆ.

ಪಂಜರವನ್ನು ಮುರಿದು ಹಾರುವ ಧೈರ್ಯ ಬೇಕು.

ನಮಗೂ ಸ್ವಂತ ರೆಕ್ಕೆಗಳಿವೆ; ಅವುಗಳ ಗರಿಗೆದರಿ ಬೀಸಿದರೆ ನಾವೂ ಸ್ವಚ್ಛಂದವಾಗಿ ಹಾರಬಲ್ಲೆವು ಎನ್ನುವ ನಿಜದ ಅರಿವು ಬೇಕು.

ಕಾಂಕ್ರೀಟು ಕಟ್ಟಡಗಳೊಳಗಿನ ಹವಾನಿಯಂತ್ರಿತ ಬದ್ಧಜೀವನದಿಂದ ಹೊರಬರಬೇಕು.

ಆಕಾಶದಲ್ಲಿ ಹಾಯಾಗಿ ಬೀಸುವ ನಿಜವಾದ ಗಾಳಿಯಲ್ಲಿ ಉಸಿರಾಡುವ ಆನಂದದ ಅನುಭವವಾಗಬೇಕು.

ಆಗ 'ನಾನು-ನೀನು' ಯಾವುದೂ ಅಲ್ಲದ 'ಆನು' ಪರಿಚಯವಾಗುತ್ತದೆ.

ಎಲ್ಲಕ್ಕಿಂತ ಮುಖ್ಯ ಬೇಲಿ ಮುರಿಯುವ ಧೈರ್ಯ ಬೇಕು. ನಾವು ಈಜಾಡುವ ಬಾವಿಗಿಂತ ಈ ಪ್ರಪಂಚ ಬಹಳ ದೊಡ್ಡದಿದೆ ಎನ್ನವುದು ಗೊತ್ತಾಗಬೇಕು.

ಅದಕ್ಕಾಗಿ ಹೊರಗಣ್ಣು ಮುಚ್ಚಿ ಒಳಗಣ್ಣು ತೆರೆಯಬೇಕು. □